

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕೇಂದ್ರೀಯ ವಿದ್ಯಾಲಯ ವಾಟ್ಸ್ ಆ್ಯಪ್ ಮೂಲಕ ಪಾಠ ಆರಂಭಿಸಿದ್ದು, ಮಕ್ಕಳು ಮನೆಯಲ್ಲಿ ಕುಳಿತೇ ಪಾಠ ಕಲಿಯುತ್ತಿದ್ದಾರೆ. ಚಿತ್ರ: ಜನಾರ್ದನ್ ಬಿ.ಕೆ.






ಕಟ್ಟಡವೂ ಸೇರಿದಂತೆ ಮೂಲಸೌಕರ್ಯಗಳೇ ಇಲ್ಲ. ಮಹಾಪೂರದಿಂದ ತತ್ತರಿಸಿದ ಉತ್ತರ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಶಾಲೆಗಳನ್ನು ಪುನರಾರಂಭ ಮಾಡುವುದೇ ದೊಡ್ಡ ಸವಾಲಾಗಿತ್ತು. ಮಕ್ಕಳು ಮರದ ಬುಡದಲ್ಲಿ ಕುಳಿತು ಪಾಠ ಕೇಳುವ ಸ್ಥಿತಿಯಿತ್ತು. ಆನ್‌ಲೈನ್ ಶಿಕ್ಷಣ ಸೌಲಭ್ಯಗಳು ಇಂತಹ ಶಾಲೆಗಳಿಗೆ ಸುಲಭವಾಗಿ ಸಿಗುವುದು ಸಾಧ್ಯವೇ ಎಂಬ ಪ್ರಶ್ನೆಯೂ ಕೇಳಿಬರುತ್ತಿದೆ. ಮಾರ್ಚ್‌ನಲ್ಲಿ ಶಾಲಾ–ಕಾಲೇಜುಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಿದ ಬಳಿಕ ಸರ್ಕಾರದಿಂದ ಹೊರಡಿಸಿದ 'ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ. ಆದರೆ, ಕಲಿಕೆಯನ್ನಲ್ಲ' ಎಂಬ ಘೋಷಣೆ ಕೇಳಲೇನೋ ಇಂಪಾಗಿದೆ. ಆದರೆ, ಸಾಧಿಸುವ ದಾರಿ ಎಲ್ಲಿದೆ?

ರಾಜ್ಯದ ಅಷ್ಟೂ ಶಾಲೆಗಳಲ್ಲಿ ಕಲಿಕೆಯ ವಿಧಾನಗಳು ಏಕರೂಪದಲ್ಲಿ ಇಲ್ಲದಿರುವ ಕಾರಣ, ಫಲಿತಾಂಶಗಳು ಸಹ ಭಿನ್ನವಾಗಿ ಬರುವುದು ನಿಸ್ಸಂಶಯ. ಉದಾಹರಣೆಗೆ ನಗರ ಪ್ರದೇಶದ ಖಾಸಗಿ ಶಾಲೆಗಳು ತಮ್ಮ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಮಾರ್ಗದರ್ಶನ ಮಾಡುವುದು, ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದು – ಇಂತಹ ಪ್ರಕ್ರಿಯೆಗಳಲ್ಲಿ ನಿರತವಾಗಿದ್ದರೆ, ಸರ್ಕಾರಿ ಶಾಲೆಗಳು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ನೆರವಿಗೆ ಹೇಗೆ ಧಾವಿಸಬೇಕು ಎಂಬುದು ತಿಳಿಯದೆ ಕಕ್ಕಾಬಿಕ್ಕಿಯಾಗಿ ಕುಳಿತಿವೆ. ಇನ್ನು ಕೆಲವೆಡೆ ಆ್ಯಪ್‌ಗಳನ್ನು ಹೇಗೆ ಬಳಸಬೇಕು ಎನ್ನುವುದು ಶಿಕ್ಷಕರ ಗೊಂದಲ. ಲೈವ್ ಸ್ಟ್ರೀಮ್ ಇರಬೇಕೇ, ಮೊದಲೇ ವಿಡಿಯೊ ಮಾಡಿಕೊಂಡ ಬೋಧನೆಗಳು ಇರಬೇಕೇ ಅಥವಾ ಎರಡನ್ನೂ ಮಿಶ್ರಣ ಮಾಡಬೇಕೇ – ಇಂತಹ ಹತ್ತಾರು ಪ್ರಶ್ನೆಗಳು ಅವರ ತಲೆ ತಿನ್ನುತ್ತಿವೆ. ಎಲ್ಲಿಯೋ ಮೊಬೈಲ್ ಮೂಲಕ ಮಕ್ಕಳನ್ನು ತಲುಪಲು ನಡೆದ ಸಣ್ಣ ಪ್ರಯತ್ನಗಳಿಗೆ ಏನೇನೋ ತಾಂತ್ರಿಕ ತೊಂದರೆ. ಶಿಕ್ಷಕರ ಧ್ವನಿಗಿಂತ ಬೇರೆ ಏನೇನೋ ಸದ್ದು. ಯಾರ ಮನೆಯಲ್ಲಿ ಟೀವಿ ಆನ್ ಮಾಡಿದ್ದೀರಿ? ಅದನ್ನು ಆಫ್ ಮಾಡಿ, ಇಲ್ಲವೆ ನಿಮ್ಮ ಮಗುವನ್ನು ಬೇರೆ ಕೋಣೆಗೆ ಕಳುಹಿಸಿ ಎಂದು ಶಿಕ್ಷಕರೇ ಕೇಳಿಕೊಳ್ಳಬೇಕಾದ ಪ್ರಮೇಯ. ಇನ್ನೊಂದೆಡೆ ಪಾಠ ಕೇಳಲು ಮಕ್ಕಳ ಕೈಗೆ ಕೊಟ್ಟ ಸ್ಮಾರ್ಟ್‌ಫೋನ್‌ಗಳು, ಎಲ್ಲಿ ವಿಡಿಯೊ ಗೇಮ್‌ಗಳಲ್ಲಿ ತೊಡಗಿಸಿಕೊಳ್ಳಲು ದುರುಪಯೋಗ ಆಗುತ್ತವೆಯೋ ಎನ್ನುವ ಚಿಂತೆ ಪಾಲಕರನ್ನು ಕಾಡಲಾರಂಭಿಸಿದೆ.

ಆನ್‌ಲೈನ್ ಶಿಕ್ಷಣದಲ್ಲಿ ಅಪಾರ ಸಾಧ್ಯತೆಗಳು, ಅಪರಿಮಿತ ಅವಕಾಶಗಳೇನೋ ಇವೆ. ಆದರೆ, ಇಂತಹ ಡಿಜಿಟಲ್ ಕಂದಕಗಳನ್ನು ಅದು ಹೇಗೆ ದಾಟುವುದೋ ಎಂಬ ಪ್ರಶ್ನೆಯೂ ಬೆನ್ನಹಿಂದೆಯೇ ಕಾಡಲು ಆರಂಭಿಸುತ್ತದೆ. ಅದು ನಡೆಸುವ ಸೀಮೋಲ್ಲಂಘನದ ಮೇಲೆಯೇ ಅದರ ಯಶಸ್ಸೂ ಅಡಗಿದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in